**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 27 ಗ್ರಾನೀಸ(4)2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24.02.2015.

**ಸುತ್ತೋಲೆ**

ವಿಷಯ: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ಖಾಸಗಿಯಾಗಿ ರೈತರು / ಇತರೇ ಸಂಘ ಸಂಸ್ಥೆಗಳಿಂದ ಬೋರ್‌ವೆಲ್‌ಗಳ ಸೇವೆಯನ್ನು ಪಾವತಿ ಆಧಾರದ ಮೇಲೆ ಪಡೆದುಕೊಳ್ಳುವ ಸಂಬಂಧದ ಮಾರ್ಗಸೂಚಿಗಳು.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 117 ಗ್ರಾನೀಸ(4)2011, ದಿ:15.10.2011 ಮತ್ತು 24.02.2012

---

1. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆದುಕೊಳ್ಳುವ ಸಂಬಂಧ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಅಗತ್ಯ ನಿರ್ದೇಶನಗಳನ್ನು ಈಗಾಗಲೇ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಹಂತದಲ್ಲಿ ಕೈಗೊಳ್ಳಬೇಕಾಗಿರುವ ಆದ್ಯತಾ / ಮುಂಜಾಗ್ರತಾ ಕ್ರಮಗಳಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದೆ.

2. ಗ್ರಾಮೀಣ ಪ್ರದೇಶಗಳಲ್ಲಿ ತುರ್ತು ಕುಡಿಯುವ ನೀರು ಪೂರೈಕೆ ಸಂಬಂಧ, ಶುದ್ಧ ಕುಡಿಯುವ ನೀರಿನ ಲಭ್ಯತೆ ಆಧರಿಸಿ, ಈಗಾಗಲೇ ಆದೇಶಿಸಿರುವಂತೆ ಕೃಷಿಕರು / ಸಂಘ ಸಂಸ್ಥೆಗಳು / ಸಾರ್ವಜನಿಕರ ಖಾಸಗಿ ಬೋರ್‌ವೆಲ್‌ಗಳ ಸೇವೆಯನ್ನು ಪಾವತಿ ಆಧಾರದ ಮೇಲೆ ಪಡೆದುಕೊಳ್ಳತಕ್ಕದ್ದು. ಇದರಿಂದ ಹೊಸ ಜಲ ಮೂಲ ಗುರುತಿಸುವುದು, ಬೋರ್‌ವೆಲ್ ಕೊರೆದು ಪಂಪು ಮೋಟಾರ್, ವಿದ್ಯುದ್ಧೀಕರಣ ಮತ್ತು ಪೈಪ್‌ಲೈನ್ ಬಾಬ್ತಿನ ಹೆಚ್ಚುವರಿ ವೆಚ್ಚ ತಪ್ಪಿಸಿ, ಸಮಯವನ್ನು ಸಹ ಉಳಿಸಬಹುದು.

3. ನೀರನ್ನು ಪಡೆಯಲು ಉದ್ದೇಶಿಸಿರುವ ಖಾಸಗಿ ಬೋರ್‌ವೆಲ್‌ಗಳಿಂದ ನೀರಾವರಿಯಾಗಿ ನಿಂತಿರುವ ಬೆಳೆ ಕೆಲವೊಮ್ಮೆ ಇರಬಹುದು, ಬೋರ್‌ವೆಲ್ ನೀರಿಲ್ಲದೆ ಸದರಿ ಬೆಳೆ ಹಾನಿಯಾಗಬಹುದು ಮತ್ತು ಬೆಳೆಗೆ ಸೂಕ್ತ ಬೆಲೆ ದೊರಕದೆ ಕೃಷಿಕರು ಸದರಿ ಫಸಲನ್ನು ತ್ಯಜಿಸಬೇಕಾಗಬಹುದು. **ಇಂತಹ ಸಂದರ್ಭಗಳಲ್ಲಿ ಅಂತಹ ಬೋರ್‌ವೆಲ್ ಮಾಲೀಕರುಗಳಿಗೆ ನೀಡಬೇಕಾದ ಪರಿಹಾರವನ್ನು ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸದರಿ ಬೋರ್‌ವೆಲ್ ನೀರಾವರಿಯಿಂದ ಬೆಳೆದ ಬೆಳೆಯಿಂದ ಲಭ್ಯವಾಗುತ್ತಿದ್ದ ವರಮಾನ / ಆದಾಯ ಆಧರಿಸಿ ಜಿಲ್ಲಾಧಿಕಾರಿಯವರಿಂದ ಅಂದಾಜಿಸಿದಂತೆ ಬೋರ್‌ವೆಲ್ ಮಾಲೀಕರಿಗೆ ಪರಿಹಾರ ನಿಗದಿಪಡಿಸಿ ಬೆಳೆ ಪರಿಹಾರವನ್ನು ಜಿಲ್ಲಾಧಿಕಾರಿಗಳ SDRF / NDRF ನಿಧಿ ಅಥವಾ NRDWP-ರಾಜ್ಯವಲಯ ಅನುದಾನದ ವತಿಯಿಂದ ಪಾವತಿಸಲು ಕ್ರಮವಹಿಸತಕ್ಕದ್ದು.**

4. ಖಾಸಗಿ ಬೋರ್‌ವೆಲ್‌ಗಳನ್ನು ಕುಡಿಯುವ ನೀರಿನ ಸಲುವಾಗಿ ಪಡೆದುಕೊಂಡ ಸಂದರ್ಭಗಳಲ್ಲಿ ನೇರವಾಗಿ ಜನವಸತಿಗಳಲ್ಲಿರುವ ಕುಡಿಯುವ ನೀರು ಸರಬರಾಜು ಪೈಪ್‌ಲೈನ್‌ಗಳಿಗೆ ಜೋಡಣೆ ಮಾಡಿ ನೀರು ಬಳಸಿಕೊಳ್ಳಲು ಕ್ರಮವಹಿಸುವುದು.

5. ಖಾಸಗಿ ಬೋರ್‌ವೆಲ್‌ಗಳನ್ನು ಕುಡಿಯುವ ನೀರಿನ ಪೂರೈಕೆ ಸಂಬಂಧ ಪಡೆದುಕೊಂಡಲ್ಲಿ, ಸದರಿ ಬೋರ್‌ವೆಲ್‌ಗಳಿಗೆ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ ಹಾಗೂ ದುರಸ್ಥಿಗಳನ್ನು ಸ್ಥಳೀಯ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿಭಾಗ ಮತ್ತು ಗ್ರಾಮ ಪಂಚಾಯತಿ ಮುಖೇನ ನಿರ್ವಹಿಸತಕ್ಕದ್ದು.

..2

6. ಮೇಲ್ಕಂಡಂತೆ ಅಗತ್ಯ ಪರಿಕ್ರಮಗಳನ್ನು ಕೈಗೊಂಡು ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಪೂರೈಕೆಯಲ್ಲಿ ಗ್ರಾಮೀಣ ಜನವಸತಿಗಳಿಗೆ ತೊಂದರೆಯಾಗದಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು ಆದ್ಯತಾ ಕ್ರಮವಹಿಸಬೇಕೆಂದು ನಿರ್ದೇಶಿಸಿದೆ.

(ಬಿ.ಎನ್. ಕೃಷ್ಣಯ್ಯ)
ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಅಪರ
ಕಾರ್ಯದರ್ಶಿ
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ (30) ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ಮುಖ್ಯ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-09.
4. ರಾಜ್ಯದ ಎಲ್ಲಾ (4) ಅಧೀಕ್ಷಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗಗಳ ವೃತ್ತಗಳು.
5. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗಗಳು.
6. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಕಾರ್ಯದರ್ಶಿಗಳು ಗ್ರಾಅಪಂ.ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ಸರ್ಕಾರದ ಕಾರ್ಯದರ್ಶಿ(DMC), ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
5. ಆಯುಕ್ತರು, ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-09. ರವರ ಆಪ್ತ ಕಾರ್ಯದರ್ಶಿ
6. ನಿರ್ದೇಶಕರು, SIRD, ಗ್ರಾಅಪಂರಾಜ್ ಇಲಾಖೆ, ಮೈಸೂರು.
7. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ " ಕರ್ನಾಟಕ ವಿಕಾಸ" ಗ್ರಾಅಪಂರಾಜ್ ಇಲಾಖೆ, ಬೆಂಗಳೂರು.